ಸಿ.ಸಿ. ನಂ. 1289/2022

ಪಿ.ಡಬ್ಲು-1

ದಿನಾಂಕಃ 13-06-2025 ರಂದು **ಸಾಕ್ಷಿಗೆ** ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಶ್ರೀ ಪಾಂಡು ವಕೀಲರಿಂದಃ**

ಆರೋಪಿ ಹೇಗೆ ಪರಿಚಯ ಎಂದರೆ ಸಾಕ್ಷಿ ಗದ್ವಾಲ್ ಯಂಕಮ್ಮ ಲೇಔಟನಲ್ಲಿರುವ ಪ್ಲಾಟ್ ನ 69 ಮತ್ತು 78 ಅನ್ನು ಆರೋಪಿ ಮಾರಾಟ ಮಾಡುವುದಾಗಿ ಹೇಳಿದ್ದು, ಆ ವಿಚಾರವಾಗಿ ನನಗೆ ಆರೋಪಿ ಪರಿಚಯ ಆಗಿರುತ್ತಾರೆ. ಅದಕ್ಕೂ ಪೂರ್ವದಲ್ಲಿ ನನ್ನ ಮತ್ತು ಆರೋಪಿ ನಡುವೆ ಪರಿಚಯ ಇರಲಿಲ್ಲ. ನಿಪಿ-5 ನೋಟಿಸ ನಲ್ಲಿ ಆರೋಪಿ ನಿನಗೆ ಒಂದು ವರ್ಷದಿಂದ ಪರಿಚಯ ಎಂದು ಹೇಳಿದ್ದು , ದೂರಿನಲ್ಲಿ ಕೆಲವು ವರ್ಷಗಳಿಂದ ಆರೋಪಿ ಗೊತ್ತು ಎಂದು ಹೇಳಿದ್ದು, ಎರಡರಲ್ಲಿ ಯಾವುದು ನಿಜ ಎಂದರೆ ಸಾಕ್ಷಿ 2020 ರಿಂದ ನನಗೆ ಆರೋಪಿ ಪರಿಚಯ ಎನ್ನುತ್ತಾರೆ. ನಿಮ್ಮ ಮತ್ತು ಆರೋಪಿ ನಡುವೆ ನೇರವಾಗಿ ಯಾವುದೇ ವ್ಯವಹಾರ ನಡೆದಿಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ.

ಆರೋಪಿಗೂ ಹಾಗೂ ನಿಮ್ಮ ಬಾವ ಪುಲಕೇಶಿಗೂ ಪರಿಚಯ ಇರುತ್ತದೆ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ಆರೋಪಿ ಹಾಗೂ ಪುಲಕೇಶಿ ನಡುವೆ ಪ್ಲಾಟ್ ಕೊಂಡುಕೊಳ್ಳುವ ಮತ್ತು ಮಾರುವ ವ್ಯವಹಾರ ಇದ್ದು ನಿಮ್ಮ ಹಾಗೂ ಆರೋಪಿ ನಡುವೆ ಯಾವುದೇ ವ್ಯವಹಾರ ಇರಲಿಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ಪುಲಕೇಶಿಯವರು ಬೆಹರಿನನಲ್ಲಿ ವಾಸ ಇರುತ್ತಾರೆ. ಪುಲಕೇಶಿ ರವರು ಬೆಹರಿನಗೆ ಹೋಗಿ 6 ವರ್ಷಗಳು ಆಗಿರುತ್ತವೆ.

2020 ರಲ್ಲಿ ಪುಲಕೇಶಿ ರವರು ರಾಯಚೂರಿಗೆ ಬಂದಿರುತ್ತಾರೆ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ನಾನು ಮೆಕ್ಯಾನಿಕಲ್ ಇಂಜನಿಯರ್ ಅಂತ ಕೆಲಸ ಮಾಡುತ್ತಿದ್ದೇನೆ. ನೀವು ದೂರಿನಲ್ಲಿ ಬಿಸಿನೆಸ್ ಮಾಡುತ್ತಿದ್ದೆನೆ ಎಂದು ಹೇಳಿರುತ್ತೀರಿ ಎಂದರೆ ಸಾಕ್ಷಿ ಮುಂಚೆ ಬಿಸಿನೆಸ್ ಮಾಡುತ್ತಿದ್ದೆ ಈಗ ಕೆಲಸ ಮಾಡುತ್ತಿದ್ದೆನು ಎನ್ನುತ್ತಾರೆ. ನೀವು ಮುಂಚೆನಿಂದಲೂ ಬಿಸಿನೆಸ್ ಮಾಡುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ.

(ಮುಂದುವರೆದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು ಸಮಯವನ್ನು ನೀಡಲಾಯಿತು.)

ಓ. ಹೇಳಿ ಸಹಿಪಡೆಯಲಾಗಿದೆ

3ನೇ ಹೆಚ್ಚುವರಿ ಹಿರಿಯ ಮತ್ತು ಸಿವಿಲ್
ನ್ಯಾಯಾಲಯ, ರಾಯಚೂರು.